# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ರಾಜರಾಜೇಶ್ವರಿ ನಗರ ವಲಯ ವ್ಯಾಪ್ತಿಯ, ರಾಜರಾಜೇಶ್ವರಿ ನಗರ ಉಪ ವಿಭಾಗದ ವಾರ್ಡ್– ಸಂಖ್ಯೆ 160ರಲ್ಲಿ ದಿನಾಂಕ: 02.07.2022 ರಂದು, ನಡೆದ ವಾರ್ಡ್ ಸಮಿತಿ ಸಭೆಯ ಸಭಾ ನಡವಳಿಗಳು**

ದಿನಾಂಕ: 02.07.2022 ರಂದು ವಾರ್ಡ್ ಸಂಖ್ಯೆ 160ರ ಜುಲೈ–2022 ಮಾಹೆಯ ಮೊದಲನೇ ಶನಿವಾರದ ವಾರ್ಡ್ ಸಮಿತಿ ಸಭೆ ನಡೆಯಿತು. ಸದರಿ ಸಭೆಯಲ್ಲಿ ವಾರ್ಡ್ ಸಮಿತಿ ಅಧ್ಯಕ್ಷರು, ಸದಸ್ಯರುಗಳು, ಅಧಿಕಾರಿಗಳು ಹಾಗೂ ಸಾರ್ವಜನಿಕರು ಭಾಗವಹಿಸಿದ್ದರು

**ಸದರಿ ಸಭೆಯಲ್ಲಿ ಈ ಕೆಳಕಂಡ ವಿಷಯಗಳ ಬಗ್ಗೆ ಚರ್ಚಿಸಲಾಯಿತು.**

- ಒಣ ಕಸ ಸಂಗ್ರಹಣಾ ಘಟಕದ ಆವರಣವನ್ನು ಸಮತಟ್ಟುಗೊಳಿಸಿ ಕಾಂಕ್ರೀಟ್ ಹಾಕಿರುವುದಕ್ಕೆ ಕಿರಿಯ ಆರೋಗ್ಯ ಪರಿವೀಕ್ಷಕರಿಗೆ ವಾರ್ಡ್ ಸಮಿತಿ ಸದಸ್ಯರುಗಳೆಲ್ಲರೂ ಧನ್ಯವಾದ ತಿಳಿಸಿದರು.
- "Zepto" Parcel ಘಟಕದಲ್ಲಿ ಕೆಲಸ ನಿರ್ವಹಿಸುವ ಕಾರ್ಮಿಕರು ರಾತ್ರಿಯ ವೇಳೆ ಸುಮಾರು 10ರಿಂದ ಬೆಳಗ್ಗೆ 6ರ ವರೆಗೆ ಕೂಡ ತುಂಬಾ ಶಬ್ದ ಮಾಡಿಕೊಂಡು ಕೆಲಸ ಮಾಡುತ್ತಿರುವುದರಿಂದ ಅಕ್ಕಪಕ್ಕದ ಮನೆಗಳ ನಿವಾಸಿಗಳಿಗೆ ನಿದ್ರೆ ಮಾಡಲು ಸಾದ್ಯವಾಗುತ್ತಿಲ್ಲ ಆದ್ದರಿಂದ ಸದರಿಯವರಿಗೆ ತಿಳಿ ಹೇಳುವಂತೆ ಆ ಭಾಗದ ನಿವಾಸಿಯಾದ ಶ್ರೀ ಮಲ್ಲಿಕಾರ್ಜುನ್ ರವರು ಕೋರಿದರು.
- ಐಡಿಯಲ್ ಹೋಮ್ಸ್ 1ನೇ ಫೇಸ್ ನ ಸಾರ್ವಜನಿಕರು ಸಿದ್ದಲಿಂಗಯ್ಯರವರ ಮನೆ ಹತ್ತಿರ ಬೀದಿ ದೀಪದ ಕಂಬ ಇರುವುದಿಲ್ಲ ಎಂದು ದೂರು ನೀಡಿ ವಿದ್ಯುತ್ ಕಂಬ ಅಳವಡಿಸಲು ಕೋರಿದರು.
- ಐಡಿಯಲ್ ಹೋಮ್ಸ್ 1ನೇ ಫೇಸ್ ನ ನಿವಾಸಿಯಾದ ಶ್ರೀಮತಿ ಸಹನಾ ರವರು ತಮ್ಮ ಪ್ರದೇಶದ 4ನೇ ಅಡ್ಡರಸ್ತೆಗೆ Street Name Board ಅಳವಡಿಸಲು ಕೋರಿದರು.
- ಪಾಲಿಕೆಯ ಅರಣ್ಯ ವಿಭಾಗದಿಂದ ಸಸಿಗಳನ್ನು ನೀಡಲಾಗಿದ್ದು, Tree Guards ನೀಡಬೇಕೆಂದು ಕೋರಿದರು.

- ಮಳೆಗಾಲದಲ್ಲಿ ಒಳಚರಂಡಿ ಮ್ಯಾನ್ ಹೋಲ್ ನಲ್ಲಿ ನೀರು ಉಕ್ಕುತ್ತಿದ್ದು, ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಕ್ತ ಕ್ರಮ ವಹಿಸಬೇಕೆಂದು ಕೋರಿದರು.

- ಬಿಇಎಂಎಲ್ ಬಡಾವಣೆಯ 5ನೇ ಹಂತದ ನಿವಾಸಿಯಾದ ಶ್ರೀಮತಿ ಸವಿತಾರವರು ಈ ಕೆಳಕಂಡ ದೂರು/ಅಹವಾಲುಗಳನ್ನು ಸಲ್ಲಿಸಿದರು.

  - ಕಳೆದ ಸಭೆಯಲ್ಲಿ ಪಾರ್ಕ್‌ಗಳಲ್ಲಿ Fencing & Tree Guards ಕಿತ್ತು ಹೋಗಿದೆಯೆಂದು ದೂರು ನೀಡಿದ್ದರೂ ಇಲ್ಲಿಯವರೆಗೂ ಸಂಬಂಧಪಟ್ಟ ಇಲಾಖೆಯ ಅಧಿಕಾರಿಗಳು ಕ್ರಮ ವಹಿಸಿರುವುದಿಲ್ಲವೆಂದು ದೂರು ನೀಡಿದರು. ಇದಕ್ಕೆ ಪ್ರತಿಕ್ರಿಯಿಸಿದ ನೋಡಲ್ ಅಧಿಕಾರಿಗಳು ಸಂಬಂಧಪಟ್ಟ ಅಧಿಕಾರಿಯವರೊಂದಿಗೆ ದೂರವಾಣಿ ಕರೆ ಮಾಡಿ ಕ್ರಮ ವಹಿಸಲು ಸೂಚಿಸಿದರು.
  - ಪ್ರಸ್ತುತ ಮಳೆಗಾಲವಾದ್ದರಿಂದ ಮಳೆಗಾಲದ ತುರ್ತು ಪರಿಸ್ಥಿತಿ ಎದುರಿಸಲು ಯಾವ ಕ್ರಮ ತೆಗೆದುಕೊಂಡಿರುವಿರೆಂದು ಪ್ರಶ್ನಿಸಲಾಗಿ ಉತ್ತರಿಸಿದ ನೋಡಲ್ ಅಧಿಕಾರಿಗಳು ಮಳೆಗಾಲದ ತಾತ್ಕಾಲಿಕ ನಿಯಂತ್ರಣ ಕೊಠಡಿ ಸ್ಥಾಪಿಸಿ ದೂರು ಪರಿಹರಿಸಲಾಗುತ್ತಿದ್ದು, ತಮ್ಮ ದೂರುಗಳಿದ್ದಲ್ಲಿ ಸಂಬಂಧಪಟ್ಟ ವಾರ್ಡ್ ಅಭಿಯಂತರರಿಗೆ ತಿಳಿಸುವಂತೆ ಸೂಚಿಸಿದರು.
  - ಕಟ್ಟಡ ನಿರ್ಮಾಣ ಮಾಡುವವರು ನಿರ್ಮಾಣದ ವೇಳೆಯಲ್ಲಿ ಡೆಬ್ರಿಸ್ ಹಾಗೂ ಮರಳನ್ನು ಚರಂಡಿಯಲ್ಲಿ ಸುರಿಯುತ್ತಾರೆ, ನಿರ್ಮಾಣದ ನಂತರ ಚರಂಡಿಯನ್ನು ಸ್ವಚ್ಛಗೊಳಿಸುವುದಿಲ್ಲ ಇದರ ಪರಿಣಾಮವಾಗಿ ಮಳೆಯ ನೀರು ಮೋರಿಯಲ್ಲಿ ಸರಾಗವಾಗಿ ಹರಿಯುವುದಕ್ಕೆ ಸಾದ್ಯವಾಗುತ್ತಿಲ್ಲವೆಂದು ಎಂದು ದೂರಿದರು.
  - ಕಳೆದ ಸಭೆಯಲ್ಲಿ ರಂಗಮಂದಿರ ಪಕ್ಕದಲ್ಲಿನ ರಸ್ತೆ ಬದಿ ಚರಂಡಿಯ ಹೂಳನ್ನು ತೆರವುಗೊಳಿಸುವಂತೆ ಕೋರಲಾಗಿದ್ದರೂ ಇಲ್ಲಿಯವರೆಗೂ ತೆರವುಗೊಳಿಸಿರುವುದಿಲ್ಲವೆಂದು ದೂರು ನೀಡಿ, ತೆರವುಗೊಳಿಸುವಂತೆ ಮತ್ತೊಮ್ಮೆ ಕೋರಿದರು.
  - ವಾರಾಂತ್ಯಗಳಲ್ಲಿ ಶ್ರೀ ಬಾಲಕೃಷ್ಣ ರಂಗಮಂದಿರದಲ್ಲಿ ನಡೆಯುವ ಕಾರ್ಯಕ್ರಮಗಳಿಗೆ ರಾತ್ರಿ 10 ಗಂಟೆಯ ನಂತರವೂ ಕೂಡ ಜೋರು ಧ್ವನಿಯಲ್ಲಿ ಧ್ವನಿವರ್ಧಕಗಳ ಮೂಲಕ ಕಾರ್ಯಕ್ರಮ ನಡೆಸುತ್ತಿರುವುದರಿಂದ ಸುತ್ತಮುತ್ತಲಿನ ಸಾರ್ವಜನಿಕರಿಗೆ ಶಬ್ದ ಮಾಲಿನ್ಯದಿಂದ ತುಂಬಾ ತೊಂದರೆಯುಂಟಾಗುತ್ತಿದೆ. ಆದ್ದರಿಂದ ರಾತ್ರಿ 10 ಗಂಟೆಯ ನಂತರ ಕಾರ್ಯಕ್ರಮ ನಡೆಸದಂತೆ ನಂತರ ನಿರ್ಬಂಧ ವಿಧಿಸಲು ಕೋರಿದರು.

- ಅರುಣಾಚಲಂ ರಸ್ತೆಯಲ್ಲಿ ವಿದ್ಯುತ್ ಕಂಬ ಅಳವಡಿಸಲು ಕಳೆದ ಸಭೆಯಲ್ಲಿ ತಿಳಿಸಿದ್ದರೂ ಕ್ರಮ ವಹಿಸಿರುವುದಿಲ್ಲವೆಂದು ದೂರು ನೀಡಲಾಗಿ, ಉತ್ತರಿಸಿದ ಬೆಸ್ಕಾಂ ವಿಬಾಗದ ಕಿರಿಯ ಅಭಿಯಂತರರು ಸಭೆ ಮುಗಿದ ನಂತರ ದೂರುದಾರರೊಂದಿಗೆ ಸ್ಥಳ ಪರಿಶೀಲನೆ ನಡೆಸಿ ಸೂಕ್ತ ಕ್ರಮ ವಹಿಸುವುದಾಗಿ ತಿಳಿಸಿದರು.
- ಮುಂದಿನ ಸಭೆಯನ್ನು ಸಂಜೆ 6.00 ಘಂಟೆಗೆ ನಿಗಧಿಪಡಿಸಲು ವಾರ್ಡ್ ಸಮಿತಿ ಸದಸ್ಯರು ಕೋರಿದರು

ವಂದನೆಗಳೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

| ಸಹಿ/- | ಸಹಿ/- |
|---|---|
| ಕಾರ್ಯದರ್ಶಿಗಳು ವಾರ್ಡ್ ಸಮಿತಿ | ನೋಡಲ್ ಅಧಿಕಾರಿಗಳು |
| ವಾರ್ಡ್ ಸಂಖ್ಯೆ-160 | ವಾರ್ಡ್ ಸಂಖ್ಯೆ-160 |

***<u>ಪ್ರತಿಯನ್ನು:-</u>***

1. ಮಾನ್ಯ ವಲಯ ಆಯುಕ್ತರು ರಾರಾನಗರ ವಲಯ ರವರ ಮಾಹಿತಿಗಾಗಿ.
2. ಮಾನ್ಯ ಜಂಟಿ ಆಯುಕ್ತರು
3. ರಾರಾನಗರ ವಲಯ ರವರ ಮಾಹಿತಿಗಾಗಿ.
4. ಮುಖ್ಯ ಅಭಿಯಂತರರು ರಾರಾನಗರ ವಲಯರವರ ಮಾಹಿತಿಗಾಗಿ.
5. ಕಾರ್ಯಪಾಲಕ ಅಭಿಯಂತರರು ರಾರಾನಗರ ವಿಭಾಗ ರವರ ಮಾಹಿತಿಗಾಗಿ.
6. ಸಭೆಯಲ್ಲಿ ಹಾಜರಿದ್ದ ಹಾಗೂ ಸಂಬಂಧಿಸಿದ ಅಧಿಕಾರಿಗಳಿಗೆ ಸೂಕ್ತ ಕ್ರಮಕ್ಕಾಗಿ.
7. ವಾರ್ಡ್ ಸಮಿತಿ ಸದಸ್ಯರುಗಳಿಗೆ.
8. ಕಛೇರಿ ಪ್ರತಿ.